

ಯಲ್ಲಿ ಕಾಣಿಸಿಕೊಳ್ಳುತ್ತೇವೆ. ನಾಲ್ಕು ಜನ ನಮ್ಮನ್ನು ನೋಡುತ್ತಾರೆ ಅಷ್ಟೇ ಸಾಕು ಅಂದುಕೊಂಡಿದ್ದೆ. ಆದರೆ, ಪ್ರೊ ಕಬಡ್ಡಿಯಿಂದ ತಾರಾಪಟ್ಟ ಲಭಿಸುತ್ತದೆ, ಎಲ್ಲಿಯೇ ಹೋದರೂ ಜನ ಕಬಡ್ಡಿ ಆಟಗಾರರನ್ನು ನೆನಪಿನಲ್ಲಿ ಇಟ್ಟುಕೊಳ್ಳುವಂತೆ ಆಗುತ್ತದೆ ಅಂದುಕೊಂಡಿರಲಿಲ್ಲ. ನಾವು ಕಲಿತ ವಿದ್ಯೆಗೆ ಫಲ ಸಿಕ್ಕಿದೆ ಎಂದು ಭಾವಿಸಿದ್ದೇನೆ.

**◆ ಫಿಟ್‌ನೆಸ್ ಸವಾಲು ಹೇಗೆ ನಿರ್ವಹಣೆ ಮಾಡುತ್ತೀರಿ?**

ಹೆಚ್ಚು ಗಾಯಗಳಾಗುವ ಕ್ರೀಡೆಯಾದ್ದರಿಂದ ಫಿಟ್‌ನೆಸ್‌ಗೆ ಆದ್ಯತೆ ಕೊಡಬೇಕಾಗುತ್ತದೆ. ಪ್ರತಿ ಸಲ ಟೂರ್ನಿ ಆರಂಭವಾಗುವ ಎರಡು ತಿಂಗಳು ಮೊದಲೇ ಅಭ್ಯಾಸ ಆರಂಭಿಸುತ್ತೇವೆ. ಫಿಟ್ ಆಗಿಯೇ ಶಿಬಿರ ಸೇರಿಕೊಳ್ಳಬೇಕಾಗುತ್ತದೆ. ಆದ್ದರಿಂದ ವರ್ಷಪೂರ್ತಿ ಫಿಟ್‌ನೆಸ್ ಕಾಪಾಡಿಕೊಳ್ಳುವುದಕ್ಕಾಗಿಯೇ ದೈಹಿಕ ಕಸರತ್ತು ಮಾಡುತ್ತೇನೆ. ಸಿಹಿ ತಿನಿಸು, ಅನ್ನ ಕಡಿಮೆ ತಿನ್ನುತ್ತೇನೆ. ಪೌಷ್ಟಿಕಾಂಶಯುಕ್ತ ಆಹಾರ ಸೇವಿಸುತ್ತೇನೆ. ಹೆಚ್ಚು ಹಾಲು ಕುಡಿಯುತ್ತೇನೆ. ಜಿಮ್, ನಿತ್ಯ ಓಟದಿಂದ ಫಿಟ್‌ನೆಸ್ ಕಾಪಾಡಿಕೊಳ್ಳುವೆ.

**◆ ಈ ಸಲದ ಲೀಗ್‌ನ ಸವಾಲು ಹೇಗಿದೆ?**

ಪ್ರತಿ ಋತುವೂ ಹೊಸ ಸವಾಲು. ಹೊಸ ಆಟಗಾರರು, ತಂಡಗಳು ಬರುತ್ತಲೇ ಇರುತ್ತವೆ. ವಿಭಿನ್ನ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಈ ಸಲ ಯುವ ಆಟಗಾರರು ಹೆಚ್ಚಾಗಿ ಬಂದಿರುವ ಕಾರಣ ಅವರಿಗೆ ಆದ್ಯತೆ ಕೊಡಬೇಕು. ಲೀಗ್ ಮುಂದುವರಿಯಬೇಕು, ಹೊಸ ಪ್ರತಿಭೆಗಳು ಬೆಳಕಿಗೆ ಬರಬೇಕಾದರೆ ಅವಕಾಶ ಮಾಡಿಕೊಡಬೇಕು. ಇಷ್ಟು ವರ್ಷಗಳ ಕ್ರೀಡಾ ಬದುಕಿನಲ್ಲಿ ಕಲಿತ ಕೌಶಲ, ತಾಂತ್ರಿಕ ವಿಷಯಗಳನ್ನು ಹೊಸಬರಿಗೆ ಹೇಳಿಕೊಡಬೇಕಾಗಿದೆ. ಅವರೊಂದಿಗೆ ಅನುಭವ ಹಂಚಿಕೊಳ್ಳುತ್ತಿರುವೆ.

**◆ ಪ್ರೊ ಕಬಡ್ಡಿ ಆರಂಭವಾದ ಬಳಿಕ ಆಟಗಾರರ ಹಣಕಾಸಿನ ಪರಿಸ್ಥಿತಿ ಹೇಗಿದೆ? ದೊಡ್ಡ ಗಳಿಕೆಯು ಯುವಕರನ್ನು ಆಕರ್ಷಿಸುತ್ತಿದೆಯೇ?**

20–21 ವರ್ಷದ ಆಟಗಾರರಿಗೆ 50 ಲಕ್ಷದಿಂದ 1 ಕೋಟಿ ತನಕ ಹಣ ಸಿಗುತ್ತಿದೆ. ರಾಜ್ಯಮಟ್ಟದ ಟೂರ್ನಿಯಲ್ಲಿ ಗೆದ್ದವರಿಗೆ 5 ಸಾವಿರ ಸಿಕ್ಕರೆ ಅದೇ ಹೆಚ್ಚು. ಈಗ ಲಕ್ಷಗಟ್ಟಲೆ ಹಣ ಸಿಗುತ್ತದೆ. ಆಟಗಾರರು ಹೆಚ್ಚು ಶ್ರಮ ಹಾಕಿ ಅಭ್ಯಾಸ ಮಾಡುತ್ತಿದ್ದಾರೆ.

**◆ ಮ್ಯಾಟ್ ಮೇಲೆ ನಿರಂತರವಾಗಿ ಆಡುತ್ತಿರುವುದರಿಂದ ಕಬಡ್ಡಿ ಆಡುವ ಆಟಗಾರರ ಸಮಯ ಕಡಿಮೆಯಾಗುತ್ತಿದೆ. ಇದು ಭವಿಷ್ಯದಲ್ಲಿ ಕಂಟಕವಾಗುತ್ತದೆ ಎನ್ನುವ ಆತಂಕವಿದೆಯಲ್ಲ?**

ಮ್ಯಾಟ್ ಮೇಲೆ ಆಡುವುದರಿಂದ ಗಾಯಗಳು ಆಗುವುದು ಹೆಚ್ಚು ಎನ್ನುವುದನ್ನು ಒಪ್ಪುತ್ತೇನೆ. ನಮಗೆಲ್ಲ ಮೊದಲಿನಿಂದಲೂ ಮಣ್ಣಿನ ಮೇಲೆ ಆಡಿಯೇ ರೂಢಿ. ಮಣ್ಣಿನ ಅಂಕಣದಲ್ಲಿ ಆಡುವುದರಿಂದ ಗಾಯ ಕಡಿಮೆಯಾಗುತ್ತಿದ್ದವು. ಗಂಭೀರವಾಗಿ ಇರುತ್ತಿರಲಿಲ್ಲ ಎನ್ನುವುದು ನಿಜ. ಆದರೆ, ವೃತ್ತಿಪರವಾಗಿ ಕ್ರೀಡೆ ಬದಲಾದಂತೆಲ್ಲ ನಾವೂ ಬದಲಾಗಬೇಕಲ್ಲವೇ? ಹಾಗಾಗಿ ಮ್ಯಾಟ್ ಮೇಲೆ ಆಡುವುದು ಅನಿವಾರ್ಯ. ಈಗ ಗ್ರಾಮೀಣ ಪ್ರದೇಶದಲ್ಲಿಯೂ ಮ್ಯಾಟ್ ಮೇಲೆ ಕಬಡ್ಡಿ ಆಡಿಸಲಾಗುತ್ತಿದೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಗಳು ಮ್ಯಾಟ್ ಮೇಲೆ ನಡೆಯುತ್ತಿವೆ. ■




ವಾಹಿನಿಗಳಲ್ಲಿ ನೇರಪ್ರಸಾರದಲ್ಲಿ ತೋರಿಸಿ ಆಕರ್ಷಕ ಪ್ರಸ್ತುತಿ ಮತ್ತು ನಿರ್ಮಾಣದಿಂದಾಗಿ ವೀಕ್ಷಕರನ್ನು ಆಕರ್ಷಿಸುವುದು ಸಂಘಟಕರಿಗೆ ಸಾಧ್ಯವಾಯಿತು.

## ‘ಲೀಗ್’ ಸವಾಲಿಗೆ ಸೆಡ್ಡು

2008ರಲ್ಲಿ ಆರಂಭವಾದ ‘ಮಿಲಿಯನ್ ಡಾಲರ್ ಬೇಬಿ’ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕಡಿಮೆ ಸಮಯದಲ್ಲಿ ಪಡೆದ ಜನಮನ್ನಣೆ, ಹೊಸ ಸ್ವರೂಪ, ಕೋಟ್ಯಂತರ ರೂಪಾಯಿ ಹಣ ಮತ್ತು ತಾರಾ ವರ್ಚಸ್ಸಿನ ಪ್ರಭಾವದಿಂದ ವಿವಿಧ ಕ್ರೀಡಾ ಸಂಸ್ಥೆಗಳು ಹಾಗೂ ಫೆಡರೇಷನ್‌ಗಳು ‘ಲೀಗ್’ಗಳ ಮೊರೆ ಹೋದವು.

ಇಂಡಿಯನ್ ಸೂಪರ್ ಲೀಗ್, ಪ್ರೀಮಿಯರ್

**ಸವಾಲಿಗೆ ಸೈ: ‘ಪ್ರೊ ಕಬಡ್ಡಿ’ ಸೀಸನ್ 9ರ ತಂಡಗಳ ನಾಯಕರು**
ಫೋಟೊ: ಎಸ್‌.ಕೆ. ದಿನೇಶ್